1650 (2108) ಶ್ರೀ ವಿಶ್ವನಾಥ ಹೆಚ್ ಎಂ (ಸಕಲೇಶಪುರ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾಕ್ಷರತಾ ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೇರಕ ಮತ್ತು ಉಪ ಪ್ರೇರಕರಿಗೆ ಗೌರವ ಧನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು,

ಇ) ಯಾವಾಗ ಗೌರವ ಧನ ವಿತರಣೆ ಮಾಡಲಾಗುವುದು,

ಈ) ಇಡೀ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಿಗೆ ಈ ಯೋಜನೆಯನ್ನು ನೀಡಲಾಗಿದೆ ಹಾಗೂ ಯೋಜನೆಗೆ ನೀಡಿರುವ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವು 5 ವರ್ಷದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾಗಿದೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದಂತೆ ಪ್ರೇರಕರ/ಉಪಪ್ರೇರಕರ ಗೌರವಧನವನ್ನು ನೀಡಲಾಗಿದೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾದ ಅವಧಿಗೆ ಗೌರವ ಧನವನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ

ಆ) ಮಂಜೂರಾಗಿರುವ 27 ಯೋಜನೆಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಜಿಲ್ಲಾ ಸಾಕ್ಷರತಾ ಸಮಿತಿಗಳಿಂದ ತ್ವರಿತವಾಗಿ ಪಡೆದು, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ 17 ಯೋಜನೆಗಳ ಅನುದಾನ ಬಿಡುಗಡೆಯಾಗಿ ಗೌರವಧನ ಪಾವತಿಸಲಾಗಿದೆ ಮೂರು ಯೋಜನೆಗಳ ಅನುದಾನ ಬಿಡುಗಡೆಗಾಗಿ ಮುಂಗಡ ರಸೀದಿ ಕಳುಹಿಸಲಾಗಿದೆ ಉಳಿದ ಯೋಜನೆಗಳ ಅನುದಾನ ಬಿಡುಗಡೆಗೆ ಪತ್ರ ವ್ಯವಹಾರದ ಮುಖೇನ ಒತ್ತಾಯ ತರಲಾಗುತ್ತದೆ ಬಳಕೆ ಪ್ರಮಾಣ ಪತ್ರ ಬಂದಿರುವ

ಜಿಲ್ಲೆಗಳಿಗೆ ಮರು ಹೊಂದಾಣಿಕೆ ಶರತ್ತಿಗೊಳಪಟ್ಟ ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ವತಿಯಿಂದ 3 ತಿಂಗಳ ಪ್ರೇರಕರ ಗೌರವ ಧನವನ್ನು ಪಾವತಿಸಲು ಮುಂಗಡವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ

ಇ) ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಯಾಗಬೇಕಿದ್ದು ಬಿಡುಗಡೆ ಯಾದ ಕೂಡಲೆ ಆಯಾ ಜಿಲ್ಲೆಗಳಿಗೆ ಗೌರವ ಧನವನ್ನು ಪಾವತಿಸಲಾಗುವುದು

ಈ) ರಾಜ್ಯದ 27 ಜಿಲ್ಲೆಗಳ ಪೈಕಿ ಗುಲಬರ್ಗಾ ಜಿಲ್ಲೆ ಹೊರತು ಪಡಿಸಿ 26 ಜಿಲ್ಲೆಗಳಿಗೆ ಯೋಜನೆಗಳು ಮಂಜೂರಾಗಿವೆ ಯೋಜನೆಗೆ ನೀಡಲಾಗಿರುವ ಒಟ್ಟು ಮೊತ್ತ ರೂ 11,427,07,151 ಗಳಾಗಿದ್ದು ಯೋಜನೆವಾರು ನೀಡಿದ ಮೊತ್ತದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಬಿಡುಗಡೆ ಮಾಡಲಾಗಿರುವ ಮೊತ್ತ
1	ಬಾಗಲಕೋಟೆ	22641800
2	ದಾವಣಗೆರೆ	42955725
3	ಕೊಪ್ಪಳ	31988157
4	ತುಮಕೂರು	78687302
5	ಚಿತ್ರದುರ್ಗ	107811093
6	ಬೀದರ್	35364000
7	ಹಾವೇರಿ	45142550
8	ಮೈಸೂರು	71921000
9	ಉತ್ತರ ಕನ್ನಡ	55497133

10	ದಕ್ಷಿಣ ಕನ್ನಡ	30368250
11	ಉಡುಪಿ	49266987
12	ಬಳ್ಳಾರಿ	41739500
13	ಮಂಡ್ಯ	44181339
14	ಶಿವಮೊಗ್ಗ	38715421
15	ಕೊಡಗು	13872750
16	ರಾಯಚೂರು	30300375
17	ಬಿಜಾಪುರ	34597500
18	ಚಿಕ್ಕಮಗಳೂರು	14516754
19	ಚಾಮರಾಜನಗರ	24682500
20	ಬೆಸಿಸ್	46095000
21	ಬೆಂಗಳೂರು ಗ್ರಾಮಾಂತರ	42684500
22	ಕೋಲಾರ	54725630
23	ಬೆಂಗಳೂರು ನಗರ	29122400
24	ಗದಗ	27022735
25	ಧಾರವಾಡ	44648000
26	ಹಾಸನ	26767000
27	ಬೆಳಗಾಂ	57391750
	ಒಟ್ಟು	**114,27,07,151**